KATK010046322018

# ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

## ಸ್ಪೆಷಲ್ ಕೇಸ್ ನಂ. 384/2018

| | | |
|---|---|---|
| ಹೆಸರು | ಕೆ.ಹೆಚ್. ಪುರುಷೋತ್ತಮ | ಫ್ರಾಸಾ- 8 |
| ತಂದೆಯ ಹೆಸರು | ಸಿ.ಹನುಮಂತರಾಯಪ್ಪ | ಚಾಸಾ- 8 |
| ವಯಸ್ಸು | 50 ವರ್ಷ | |
| ಉದ್ಯೋಗ | ಹೆಚ್.ಸಿ. 180, ತುಮಕೂರು ನಗರ ಪೊಲೀಸ್ ಠಾಣೆ | |
| ವಾಸಸ್ಥಳ | ತುಮಕೂರು | |

ದಿನಾಂಕಃ **23-09-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ-**

ನಾನು ಬೆಸ್ಕಾಂ ಜಾಗೃತ ದಳ ಪೊಲೀಸ್ ಠಾಣೆಯಲ್ಲಿ 01-02-2017 ರಿಂದ 13-05-2021 ರವರೆಗೆ ಹೆಚ್.ಸಿ. ಆಗಿ ಕೆಲಸ ಮಾಡಿದ್ದೇನೆ. ದಿಃ 02-03-2017 ರಂದು ನಾನು ಪಿಐ ಯಶವಂತ್ , ಎಇಇ ಹಾಗೂ ಸಿಬ್ಬಂದಿಯವರ ಜೊತೆಯಲ್ಲಿ ತಿಪಟೂರು ತಾಲ್ಲೂಕಿನ ರಂಗಾಪುರ ಗ್ರಾಮ ಪಂಚಾಯತಿಯ ಕೆರಗೋಡು ಗ್ರಾಮದ ಸ.ನಂ. 268 ರ ಸತೀಶ್ ಎಂಬುವವರ ಜಮೀನಿಗೆ ಹೋಗಿದ್ದೆವು. ಅಲ್ಲಿ ಬೆಸ್ಕಾಂ ನವರು ವಿದ್ಯುತ್ ಸ್ಥಾವರವನ್ನು ಪರಿಶೀಲಿಸಿದರು. ಜಮೀನಿನಲ್ಲಿರುವ ಕೊಳವೆ ಬಾವಿಯಿಂದ ಟ್ರಾಕ್ಟರ್ ನ ಟ್ಯಾಂಕರ್ ಗೆ ನೀರನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ತುಂಬುತ್ತಿದ್ದರು. ಅದರ ಸಂಖ್ಯೆ KA-06-T-3882. ಬೆಸ್ಕಾಂ ನವರು ಕೊಳವೆ ಬಾವಿಗೆ ಮೀಟರ್ ನ್ನು ಅಳವಡಿಸಿರಲಿಲ್ಲ. ನೀರನ್ನು ಮಾರಾಟ ಮಾಡುತ್ತಿದ್ದರು. ಸ್ಥಳದಲ್ಲಿ ಪಂಚನಾಮೆ ಮಾಡಿದರು. ಪಂಚನಾಮೆಯನ್ನು ನಿಪಿ-1

ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಮರುದಿನ ನಾನು ಫಿರ್ಯಾದನ್ನು ನೀಡಿದೆನು. ಫಿರ್ಯಾದನ್ನು ನಿಪಿ-3 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

ಸಂಜೆ 5 ಗಂಟೆಗೆ ನಾವು ಜಮೀನಿನ ಬಳಿ ಹೋದೆವು. ಅಲ್ಲಿ ಅರ್ಧ ಗಂಟೆ ಕಾಲ ಇದ್ದೆವು. ಸ್ಥಳದಲ್ಲಿ ಇದ್ದವರು ನೀರನ್ನು ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿದರು. ಅವರ ಹೇಳಿಕೆಯನ್ನು ತೆಗೆದುಕೊಳ್ಳಲಿಲ್ಲ. ನಂತರ ನಾವು ತಿಪಟೂರಿಗೆ ಹೋದೆವು. ಆ ದಿನ ಎಇಇ ರವರು ದೂರು ನೀಡಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

ಸ.ನಂ. 268 ರ ಜಮೀನು ಆರೋಪಿ ತನ್ನದು ಎಂದು ಹೇಳಿದರು. ಆರೋಪಿ ಮಹಜರ್ ಗೆ ಸಹಿ ಮಾಡಿದರು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು